



# ಚರ್ಮವ್ಯಾಧಿಗೆ ಆಯುರ್ವೇದ

ಚರ್ಮರೋಗ ಸಾಮಾನ್ಯವಾಗಿ ಎಲ್ಲ ವರ್ಗದ ಜನರಲ್ಲೂ ಕಾಣಿಸಿಕೊಳ್ಳುವಂತಹ ಸಾಮಾನ್ಯ ಸಮಸ್ಯೆ. ಆಯುರ್ವೇದದಲ್ಲಿ ಎಲ್ಲ ರೀತಿಯ ಚರ್ಮವ್ಯಾದಿಗಳಿಗೂ ಉತ್ತಮ ಪರಿಹಾರವಿದೆ.

■ ಡಾ.ವೀಣಾ ಅರ್ಹಂತ್

ಚರ್ಮಕ್ಕೆ ಉಂಟಾಗುವ ತೊಂದರೆ, ಸಮಸ್ಯೆ ಒಂದೆರಡಲ್ಲ. ಚರ್ಮವ್ಯಾಧಿ ಸಾಮಾನ್ಯವಾಗಿ ಎಲ್ಲ ವಯೋಮಾನದವರನ್ನೂ ಕಾಡುತ್ತದೆ. ಚಿಕ್ಕ ಮಕ್ಕಳಲ್ಲೂ ಇದರ ಕಾಟ ಹೆಚ್ಚು. ಕೆಲವು ಚರ್ಮವ್ಯಾಧಿಗಳು ಸುಲಭದಲ್ಲಿ ಗುಣವಾಗುವಂಥವು ಆದರೆ ಇನ್ನೂ ಕೆಲವು ತೀವ್ರ ಸ್ವರೂಪದವು.

ಸಣ್ಣಪುಟ್ಟ ಚರ್ಮದ ಕಾಯಿಲೆಗಳನ್ನು ಮನೆಮದ್ದಿನಿಂದಲೇ ಸುಲಭವಾಗಿ ಗುಣಪಡಿಸಬಹುದು. ಇನ್ನು ಕೆಲವು ತೀವ್ರತರದ ಸಮಸ್ಯೆಗಳಿಗೂ ಮನೆಮದ್ದು ಇರುವುದಾದರೂ ಗುಣವಾಗುವ ಸಮಯ ಹೆಚ್ಚು ತಗಲುತ್ತದೆ. ಆಯುರ್ವೇದದಲ್ಲಿ ಚರ್ಮವ್ಯಾಧಿಗೆ ಉತ್ತಮ ಔಷಧಿಗಳಿವೆ.

ತ್ವಚೆಯಲ್ಲಿ ಉಂಟಾಗುವ ಎಲ್ಲ ರೋಗಗಳಿಗೂ ಆಯುರ್ವೇದ ಪರಿಭಾಷೆಯಲ್ಲಿ 'ಕುಷ್ಠ' ಎಂದೇ ಹೆಸರು. ಯಾವುದು ಶರೀರವನ್ನು ವಿಕೃತಗೊಳಿಸುವುದೋ ಅಥವಾ ಶರೀರ ವಿಕೃತವಾಗಿ ಕಾಣುವಂತೆ ಮಾಡುತ್ತದೆಯೋ ಅದನ್ನು ಕುಷ್ಠ ಎಂದು ಪರಿಗಣಿಸಬಹುದು. ಇದರಲ್ಲಿರುವ ವೈವಿಧ್ಯ ಅಪಾರ. ಇಂದಿನ ದಿನಗಳಲ್ಲಿ ಅತಿ ಸಾಮಾನ್ಯವಾಗಿ ಕಂಡುಬರುವ ಚರ್ಮವ್ಯಾಧಿಗಳೆಂದರೆ, ಇಸಬು ರೋಗ, ಬಿಳುಪು ರೋಗ ಮತ್ತು ಸೋರಿಯಾಸಿಸ್. ಇವುಗಳನ್ನು ಆಯುರ್ವೇದ ಔಷಧಿಯಿಂದ ಬೇರು ಸಹಿತ ಗುಣಪಡಿಸಬಹುದು.

ಚರ್ಮರೋಗವನ್ನು ಕಡೆಗಣಿಸಬೇಡಿ. ಏಕೆಂದರೆ ಸಣ್ಣಪುಟ್ಟ ರೋಗಗಳು ಕೂಡಾ ನಾಳೆ ಮಾರಣಾಂತಿಕವಾಗಿ ಕಾಡಿಸಬಹುದು. ಸುಮ್ಮನೆ ಅಲರ್ಜಿ ಎಂದು ಮುಲಾಮು ಮತ್ತು ಔಷಧ ತೆಗೆದುಕೊಂಡು ಕಡಿಮೆಯಾಗಿದೆ ಎಂದು ಭಾವಿಸಿದರೆ ಅದು ಅಕ್ಷರಶಃ ತಪ್ಪಾಗುತ್ತದೆ. ಮುಂದಿನ ದಿನಗಳಲ್ಲಿ ಭಯಂಕರ ರೂಪದಲ್ಲಿ ಕಾಣಿಸಿಕೊಳ್ಳಬಹುದು; ಕಾಡಬಹುದು. ಸರಿಯಾದ ಸಮಯದಲ್ಲಿ ಸೂಕ್ತವಾದ ಆಯುರ್ವೇದ ಚಿಕಿತ್ಸೆ ತೆಗೆದುಕೊಳ್ಳುವುದು ಅತಿ ಮುಖ್ಯ.

## ಇಸಬು ರೋಗ

ಇಸಬು ಅಥವಾ ಎಕ್ಸಿಮಾ ಎಂದು ಜನಸಾಮಾನ್ಯರಲ್ಲಿ ಕಂಡುಬರುವ ಕಾಯಿಲೆ. ಈ ರೋಗವನ್ನು ಆಯುರ್ವೇದದಲ್ಲಿ ವಿರ್ಚಕಾ ಎಂದು ಕರೆಯುವರು. ಇದರಲ್ಲಿ ಕೈ ಕಾಲುಗಳ ಚರ್ಮ ಸೀಳಿಕೊಂಡು, ಅತೀವವಾದ ನವೆ ಇರುತ್ತದೆ. ಇದು ಸ್ತ್ರೀಯರಲ್ಲಿ ಹೆಚ್ಚಾಗಿ ಕಂಡುಬರುವುದು. ಕಫ ದೋಷ ಪ್ರಧಾನವಾದ ಕಾಯಿಲೆ ಇದಾಗಿದ್ದು ಆಯುರ್ವೇದ ಗ್ರಂಥಗಳಲ್ಲಿ ಇದಕ್ಕೆ ಹಲವಾರು ಕಾರಣಗಳನ್ನು ಹೇಳಲಾಗಿದೆ.

ವಿರುದ್ಧಾಹಾರಗಳ ಸೇವನೆಯಿಂದ ದೇಹದಲ್ಲಿನ ವಾತ, ಪಿತ್ತ, ಕಫಗಳು ಕುಪಿತಗೊಂಡು ತ್ವಚೆಯಲ್ಲಿನ ಜಲಾಂಶ ದೂಷಿತಗೊಳಿಸಿ ರಕ್ತ, ಮಾಂಸ, ಮೇಧ ಮತ್ತು ಸಮಸ್ತ ಶರೀರವನ್ನು ಕಲುಷಿತಗೊಳಿಸುತ್ತದೆ. ಆ ಮೂಲಕ ಇಸಬು ರೋಗವನ್ನುಂಟು ಮಾಡುತ್ತದೆ. ಈ ಕಾಯಿಲೆಯಲ್ಲಿ ನಾನಾ ವಿಧದ ಸ್ರಾವವುಳ್ಳ, ಒರಟು ಸ್ಪರ್ಶ ಹೊಂದಿರುವ, ಉರಿ, ನವೆ ಹೆಚ್ಚಾಗಿರುವ ಬೂದು ಬಣ್ಣದ ಗುಳ್ಳೆಗಳು ಏಳುತ್ತವೆ.

## ಚಿಕಿತ್ಸೆ ಏನು?

ಹರಿದ್ರಾ ಖಾಂಡ, ಖದಿರ ಚೂರ್ಣ, ದೂರ್ವಾದಿ ತೈಲ, ಆರಗ್ವದ ಕ್ವಾಥ ಮುಂತಾದವುಗಳನ್ನು ವೈದ್ಯರ ಸಲಹೆಯಂತೆ ತೆಗೆದುಕೊಳ್ಳಬೇಕು.